ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ
ಮೊದಲನೇ ಮಹಡಿ, ನೆಹರು ಪಾರ್ಕ್ ಎದುರು,
ಕೀಲುಕೋಟೆ ಬಡಾವಣೆ, ಕೋಲಾರ-563101.
ದೂರವಾಣಿ:-225654

ಕರ್ನಾಟಕ ಸರ್ಕಾರ

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಕೋಲಾರ
ಮೊದಲನೇ ಮಹಡಿ, ನೆಹರು ಪಾರ್ಕ್ ಎದುರು, ಕೀಲುಕೋಟೆ ಬಡಾವಣೆ, ಕೋಲಾರ-563101
ದೂರವಾಣಿ ಸಂಖ್ಯೆ : 08152-225654 ಇ-ಮೇಲ್ - adtpkolar@gmail.com

**ಸಂ: ನಗ್ರಾಯೋಸನಿ/ಕೋ/ತಾಂ.ಶಾಖೆ/95/ವಿನ್ಯಾಸ/2024-25** / 770 **ದಿನಾಂಕ :** 15/10/2024

**ನೋಂದಾಯಿತ ಅಂಚೆ /ಸ್ವೀಕೃತಿ ನಿರೀಕ್ಷೆ**

**"ತಾಂತ್ರಿಕ ಅನುಮೋದನೆ"**

**ವಿಷಯ :** ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ನಿದರಮಂಗಲ ಗ್ರಾಮದ ಸ.ನಂ.208/2 ರಲ್ಲಿ 02ಎ-20ಗು, 208/3 ರಲ್ಲಿ 0ಎ-16ಗುಂಟೆ ಹಾಗೂ ಗೊಲ್ಲಹಳ್ಳಿ ಗ್ರಾಮದ ಸ.ನಂ.1 ರಲ್ಲಿ 04ಎ-05ಗುಂಟೆ, ಸ.ನಂ.2 ರಲ್ಲಿ 03ಎ-38ಗುಂಟೆ, ಸ.ನಂ.4/1 ರಲ್ಲಿ 01ಎ-16ಗುಂಟೆ, ಸ.ನಂ.5/2 ರಲ್ಲಿ 01ಎ-08ಗುಂಟೆ, ಸ.ನಂ.7 ರಲ್ಲಿ 03ಎ-30ಗುಂಟೆ, ಸ.ನಂ.8 ರಲ್ಲಿ 04ಎ-31ಗುಂಟೆ, ಸ.ನಂ.10 ರಲ್ಲಿ 01ಎ-20ಗುಂಟೆ, ಸ.ನಂ.11 ರಲ್ಲಿ 0ಎ-26ಗುಂಟೆ, ಸ.ನಂ.12 ರಲ್ಲಿ 01ಎ-27ಗುಂಟೆ, ಸ.ನಂ.13 ರಲ್ಲಿ 01ಎ-27ಗುಂಟೆ, ಸ.ನಂ.15 ರಲ್ಲಿ 0ಎ-31ಗುಂಟೆ, ಸ.ನಂ.16 ರಲ್ಲಿ 0ಎ-25ಗುಂಟೆ, ಸ.ನಂ.17 ರಲ್ಲಿ 01ಎ-13ಗುಂಟೆ, ಸ.ನಂ.18 ರಲ್ಲಿ 02ಎ-09ಗುಂಟೆ, ಸ.ನಂ.20 ರಲ್ಲಿ 0ಎ-39ಗುಂಟೆ, ಸ.ನಂ.21 ರಲ್ಲಿ 04ಎ-23ಗುಂಟೆ, ಸ.ನಂ.22 ರಲ್ಲಿ 04ಎ-25ಗುಂಟೆ, ಸ.ನಂ.24 ರಲ್ಲಿ 02ಎ-08ಗುಂಟೆ, ಸ.ನಂ.27 ರಲ್ಲಿ 03ಎ-25ಗುಂಟೆ, ಸ.ನಂ.23/1 ರಲ್ಲಿ 04ಎ-23ಗುಂಟೆ ಮತ್ತು ಸ.ನಂ.23/2 ರಲ್ಲಿ 0ಎ-05ಗುಂಟೆ **ಒಟ್ಟು 53ಎ-10ಗುಂಟೆ** ವಿಸ್ತೀರ್ಣದ ಭೂಪರಿವರ್ತಿತ ಜಮೀನಿಗೆ **ವಸತಿ** ಉದ್ದೇಶದ ಬಹುನಿವೇಶನ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ.

ಕೋಲಾರ

**(ಅರ್ಜಿದಾರರು:** M/S SANNIDHI GREENS. Rep. its Managing Partners Sri. Chandrashekar Reddy Chaganti And Sri. K.N. Shiva Reddy.)

Housiey.com

**ಉಲ್ಲೇಖ :**

1. ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ರವರ ಅಧಿಕೃತ ಜ್ಞಾಪನಾ ಪತ್ರ ಅರ್ಜಿ ಸಂಖ್ಯೆಗಳು: 537833, 537835, 537837, 537841, 537812, 537813, 537816, 537818, 537819, 537824, 537826, 537828, 537829, 537832, 537840 ದಿನಾಂಕ:06.11.2023, 622314, 622308, 622306, 622319, 624929, 624935 ದಿ:22.03.2024, 691309, 691322 ದಿ;29.08.2024.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಕುಂತೂರು ಗ್ರಾಮ ಪಂಚಾಯಿತಿ ಕಾರ್ಯಾಲಯ, ಮಾಲೂರು ತಾಲ್ಲೂಕು ರವರ ಪತ್ರ ಸಂಖ್ಯೆ: ಚಿ.ಕು.ಗ್ರಾ.ಪಂ.ನಂ.04 /2024-25 ದಿನಾಂಕ: 11.09.2024. (ಸ್ವೀಕೃತಿ ದಿನಾಂಕ:17.09.2024)
3. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಂಡಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಮಾಲೂರು ತಾಲ್ಲೂಕು ರವರ ಪತ್ರ ಸಂಖ್ಯೆ: ಕೊ.ಗ್ರಾ.ಪಂ.ನಕ್ಷೆ /118/2024-25 ದಿನಾಂಕ: 17.09.2024.
4. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ ಕೋಲಾರ ರವರ ಪತ್ರ ಸಂಖ್ಯೆ:ಸ.ಕಾ.ಇಂ/ಸ.ನೀ& ಅಂಅಉವಿ/ಕೋ/334/2024-25, ದಿ:30.09.2024
5. ಕೇಂದ್ರ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ: DTCP-TECHOCIRC/1/2024 (E-1296905)/2463, ದಿನಾಂಕ:17.01.2024.
6. ಈ ಕಛೇರಿ ಪತ್ರ ಸಂಖ್ಯೆ: ನಗ್ರಾಯೋಸನಿ/ಕೋ/ತಾಂ.ಶಾಖೆ/95/ವಿನ್ಯಾಸ/2024-25/707 ದಿನಾಂಕ: 01.10.2024.
7. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ರವರ ಪತ್ರಸಂಖ್ಯೆ: DTCP-TECHOLAY(KOL)/10/2024(1545567) ದಿ:09.10.2024.
8. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೃಪಿಡಿ ಸಂಖ್ಯೆ: ಗ್ರಾಅಪ 86 ಗ್ರಾಪಂಅ 2014 ದಿನಾಂಕ : 11.11.2014.

9. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 93 ಎಂಡಬ್ಲ್ಯೂಪಿ 2023 (ಭಾ-1) ದಿನಾಂಕ:28.08.2024.

*-*-*-*-*

ವಿಷಯಕ್ಕೆ ಸಂಬಂಧಿಸಿದಂತೆ, ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ನಿದರಮಂಗಲ ಗ್ರಾಮದ ಸ.ನಂ.208/2 ರಲ್ಲಿ 02ಎ-20ಗು, 208/3 ರಲ್ಲಿ 0ಎ-16ಗುಂಟೆ ಹಾಗೂ ಗೊಲ್ಲಹಳ್ಳಿ ಗ್ರಾಮದ ಸ.ನಂ.1 ರಲ್ಲಿ 04ಎ-05ಗುಂಟೆ, ಸ.ನಂ.2 ರಲ್ಲಿ 03ಎ-38ಗುಂಟೆ, ಸ.ನಂ.4/1 ರಲ್ಲಿ 01ಎ-16ಗುಂಟೆ, ಸ.ನಂ.5/2 ರಲ್ಲಿ 01ಎ-08ಗುಂಟೆ, ಸ.ನಂ.7 ರಲ್ಲಿ 03ಎ-30ಗುಂಟೆ, ಸ.ನಂ.8 ರಲ್ಲಿ 04ಎ-31ಗುಂಟೆ, ಸ.ನಂ.10 ರಲ್ಲಿ 01ಎ-20ಗುಂಟೆ, ಸ.ನಂ.11 ರಲ್ಲಿ 0ಎ-26ಗುಂಟೆ, ಸ.ನಂ.12 ರಲ್ಲಿ 01ಎ-27ಗುಂಟೆ, ಸ.ನಂ.13 ರಲ್ಲಿ 01ಎ-27ಗುಂಟೆ, ಸ.ನಂ.15 ರಲ್ಲಿ 0ಎ-31ಗುಂಟೆ, ಸ.ನಂ.16 ರಲ್ಲಿ 0ಎ-25ಗುಂಟೆ, ಸ.ನಂ.17 ರಲ್ಲಿ 01ಎ-13ಗುಂಟೆ, ಸ.ನಂ.18 ರಲ್ಲಿ 02ಎ-09ಗುಂಟೆ, ಸ.ನಂ.20 ರಲ್ಲಿ 0ಎ-39ಗುಂಟೆ, ಸ.ನಂ.21 ರಲ್ಲಿ 04ಎ-23ಗುಂಟೆ, ಸ.ನಂ.22 ರಲ್ಲಿ 04ಎ-25ಗುಂಟೆ, ಸ.ನಂ.24 ರಲ್ಲಿ 02ಎ-08ಗುಂಟೆ, ಸ.ನಂ.27 ರಲ್ಲಿ 03ಎ-25ಗುಂಟೆ, ಸ.ನಂ.23/1 ರಲ್ಲಿ 04ಎ-23ಗುಂಟೆ ಮತ್ತು ಸ.ನಂ.23/2 ರಲ್ಲಿ 0ಎ-05ಗುಂಟೆ ವಿಸ್ತೀರ್ಣದ ಜಮೀನುಗಳನ್ನು **ವಸತಿ** ಉದ್ದೇಶಕ್ಕೆ ಭೂ ಪರಿವರ್ತಿಸಿ ಉಲ್ಲೇಖ (1) ರ ಪತ್ರದಲ್ಲಿ ಅಧಿಕೃತ ಜ್ಞಾಪನಾ ಪತ್ರಗಳನ್ನು ಹೊರಡಿಸಿರುತ್ತಾರೆ.

ಅರ್ಜಿದಾರರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, **ಚಿಕ್ಕಕುಂತೂರು** ಗ್ರಾಮ ಪಂಚಾಯಿತಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, **ಕೊಂಡಶೆಟ್ಟಿಹಳ್ಳಿ** ಗ್ರಾಮ ಪಂಚಾಯಿತಿ, ಮಾಲೂರು ತಾಲ್ಲೂಕು ರವರಿಗೆ ಸದರಿ ಭೂಪರಿವರ್ತಿತ ಜಮೀನುಗಳಿಗೆ ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿರುವ ಮೇರೆಗೆ ಉಲ್ಲೇಖ (2) ಮತ್ತು (3) ರ ಪತ್ರಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಕುಂತೂರು ಗ್ರಾಮ ಪಂಚಾಯಿತಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಂಡಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಮಾಲೂರು ತಾಲ್ಲೂಕು ಇವರು ಪ್ರಶ್ನಿತ ಪ್ರದೇಶಕ್ಕೆ **ವಸತಿ** ಉದ್ದೇಶದ ಬಹುನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ನಿದರಮಂಗಲ ಗ್ರಾಮದ 208/3 ರ ಜಮೀನಿಗೆ ಸ.ನಂ.208/2 ರ ಜಮೀನು ಮತ್ತು ಗೊಲ್ಲಹಳ್ಳಿ ಗ್ರಾಮದ ಸ.ನಂ. 1, 2, 4/1, 5/2, 7, 8, 10, 11, 12, 13, 15, 16, 17, 18, 20, 21, 22, 24, 27, 23/1, 23/2 ರ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಗೊಲ್ಲಹಳ್ಳಿ ಗ್ರಾಮದ ಸ.ನಂ.17, 16, 11 ಮತ್ತು ಸ.ನಂ.10 ಮದ್ಯೆ ಕಾಲುವೆ ಹಾದು ಹೋಗಿರುತ್ತದೆ. ಸ.ನಂ.17, 11 ರಿಂದ ಸ.ನಂ.10 ರ ಜಮೀನಿಗೆ ಸಂಪರ್ಕ ಕಲ್ಪಿಸಲು (ಕಲ್ವರ್ಟ್) ನಿರ್ಮಿಸಲು ಉಲ್ಲೇಖ (4) ರ ಪತ್ರದಲ್ಲಿ ಅನುಮತಿ ನೀಡಲಾಗಿರುತ್ತದೆ.

ವಿನ್ಯಾಸ ನಕ್ಷೆ ರಚನೆ, ಅನುಮೋದನೆ ಮತ್ತು ಪರಿಶೀಲನಾ ಶುಲ್ಕ ಸಂಬಂಧ ಅರ್ಜಿದಾರರು ಶುಲ್ಕ **ರೂ. 1,10,000/-** ರೂ. ಗಳನ್ನು ಚಲನ್ ಸಂಖ್ಯೆ: **089684653** ರಲ್ಲಿ **ದಿನಾಂಕ: 01.10.2024** ರಂದು ಅರ್ಜಿದಾರರು ಪಾವತಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಉಲ್ಲೇಖ (5) ಸುತ್ತೋಲೆಯನ್ವಯ ಉಲ್ಲೇಖ (6) ರಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಪ್ರಶ್ನಿತ ಭೂಪರಿವರ್ತಿತ ಜಮೀನುಗಳಿಗೆ ಈ ಕಛೇರಿಯಿಂದ ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಂತೆ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ಕೆಲವೊಂದು ನಿಬಂಧನೆಗೊಳಪಟ್ಟು **ವಸತಿ** ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಯನ್ನು ತಾಂತ್ರಿಕವಾಗಿ ಪರಿಶೀಲಿಸಿ ಪೂರ್ವಸಮ್ಮತಿಯೊಂದಿಗೆ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ಮೂಲ ದಾಖಲೆಗಳೊಂದಿಗೆ ಉಲ್ಲೇಖ (7) ರಲ್ಲಿ ಈ ಕಛೇರಿಗೆ ಹಿಂದುರುಗಿಸಲಾಗಿದೆ.

**ಚಿಕ್ಕಕುಂತೂರು ಗ್ರಾಮ ಪಂಚಾಯಿತಿಗೆ ಸೇರಿದ ಭೂ ಉಪಯೋಗಗಳ ವಿಶ್ಲೇಷಣೆ (ಒಟ್ಟು ವಿಸ್ತೀರ್ಣ 02ಎ-36ಗು)**

| ಕ್ರ. ಸಂ. | ಭೂ ಉಪಯೋಗ | ವಿಸ್ತೀರ್ಣ (ಚ.ಮೀ) | ಶೇಕಡ (%) |
|---|---|---|---|
| 1. | ವಸತಿ | 3916.80 | 33.38 |
| 2. | ಉದ್ಯಾನವನ/ ಬಫರ್ | 4969.02 | 42.34 |
| 3. | ರಸ್ತೆಗಾಗಿ | 2849.90 | 24.28 |
| | **ಒಟ್ಟು** | **11735.72** | **100.00** |

**ನಿವೇಶನಗಳ ವಿವರ**

| ಕ್ರ. ಸಂ. | ನಿವೇಶನಗಳ ಅಳತೆ | ಸಂಖ್ಯೆ |
|---|---|---|
| 1. | 12.19 ಮೀ X ಅನಿಯತ | 07 |
| 2. | ಅನಿಯತ (*) | 05 |
| | **ಒಟ್ಟು** | **12** |

| ಕೊಂಡಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಭೂ ಉಪಯೋಗಗಳ ವಿಶ್ಲೇಷಣೆ (ಒಟ್ಟು ವಿಸ್ತೀರ್ಣ 50ಎ-14ಗು) | | | |
|---|---|---|---|
| ಕ್ರ. ಸಂ. | ಭೂ ಉಪಯೋಗ | ವಿಸ್ತೀರ್ಣ (ಚ.ಮೀ) | ಶೇಕಡ (%) |
| 1. | ವಸತಿ | 107946.86 | 52.98 |
| 2. | ಉದ್ಯಾನವನ/ಬಫರ್ | 26026.08 | 12.77 |
| 3. | ನಾಗರೀಕ ಸೌಲಭ್ಯ | 828.13 | 00.41 |
| 4. | ರಸ್ತೆಗಾಗಿ | 68955.31 | 33.84 |
| | **ಒಟ್ಟು** | **203756.38** | **100.00** |

| ನಿವೇಶನಗಳ ವಿವರ | | |
|---|---|---|
| ಕ್ರ.ಸಂ. | ನಿವೇಶನಗಳ ಅಳತೆ | ಸಂಖ್ಯೆ |
| 1. | 18.29 ಮೀ X 18.29 ಮೀ | 12 |
| 2. | 18.29 ಮೀ X 16.89 ಮೀ | 06 |
| 3. | 15.24 ಮೀ X 18.29 ಮೀ | 15 |
| 4. | 15.24 ಮೀ X 17.31 ಮೀ | 05 |
| 5. | 15.24 ಮೀ X 15.24 ಮೀ | 08 |
| 6. | 12.19 ಮೀ X 20.48 ಮೀ | 03 |
| 7. | 12.19 ಮೀ X 21.33 ಮೀ | 05 |
| 8. | 12.19 ಮೀ X 18.29ಮೀ | 117 |
| 9. | 12.19 ಮೀ X 17.31ಮೀ | 02 |
| 10. | 12.19 ಮೀ X 15.24ಮೀ | 09 |
| 11. | 12.19 ಮೀ X 12.19ಮೀ | 02 |
| 12. | 9.14 ಮೀ X 15.24ಮೀ | 139 |
| 13. | 9.14 ಮೀ X 12.19ಮೀ | 91 |
| 14. | 12.19 ಮೀ X ಅನಿಯತ | 22 |
| 15. | 9.14 ಮೀ X ಅನಿಯತ | 69 |
| 16. | ಅನಿಯತ (*) | 96 |
| | **ಒಟ್ಟು** | **601** |

ಕೇಂದ್ರ ಕಛೇರಿಯಿಂದ ತಾಂತ್ರಿಕವಾಗಿ ಪರಿಶೀಲಿಸಲ್ಪಟ್ಟ ವಿನ್ಯಾಸ ನಕ್ಷೆಗೆ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗೊಳಪಟ್ಟು ವಿನ್ಯಾಸವನ್ನು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ. ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ ಗ್ರಾಮ ಪಂಚಾಯಿತಿಯು ವಿನ್ಯಾಸ ಅನುಮೋದನೆ ಆದೇಶ ಹೊರಡಿಸಬೇಕಾಗಿದ್ದು, ಉಲ್ಲೇಖ (8) ರ ಕೈಪಿಡಿಯಲ್ಲಿನ ಮಾರ್ಗಸೂಚಿಗಳನ್ನು ಹಾಗೂ ಉಲ್ಲೇಖ (9) ರ ಸುತ್ತೋಲೆಯಲ್ಲಿನ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಿದೆ.

<u>ನಿಬಂಧನೆಗಳು :</u>

1. **ವಿನ್ಯಾಸವು ಅನುಮೋದನೆ ನೀಡಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ನವೀಕರಿಸಿಕೊಳ್ಳತಕ್ಕದ್ದು.**
2. **ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದ ವಿನ್ಯಾಸ ಅನುಮೋದನೆ ಪಡೆದ ನಂತರ ರೇರಾ ಕಾಯ್ದೆ ಕಲಂ 3 ಮತ್ತು 4 ರಂತೆ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ (RERA) ನೋಂದಣಿ ಮಾಡಿಕೊಳ್ಳತಕ್ಕದ್ದು.**
3. ಅನುಮೋದಿತ ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಅಗತ್ಯ ಅನುಮತಿ ಪಡೆಯಬೇಕು.

4. ಅಭಿವೃದ್ಧಿ ಶುಲ್ಕವನ್ನು ಅಂದಾಜು ಪಟ್ಟಿಯಂತೆ ಹಾಗೂ ಇತರೆ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಸರ್ಕಾರಿ ಆದೇಶಗಳನ್ವಯ ಪಡೆಯತಕ್ಕದ್ದು.

5. ಅನುಮೋದಿತ ವಿನ್ಯಾಸ ನಕ್ಷೆಯಲ್ಲಿರುವಂತೆಯೇ ನಿವೇಶನಗಳು, ಉದ್ಯಾನವನ, ನಾಗರಿಕ ಸೌಲಭ್ಯದ ನಿವೇಶನ ಮತ್ತು ರಸ್ತೆಗಳಿಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ಸದರಿ ಉದ್ದೇಶಕ್ಕಾಗಿಯೇ ಕಾಯ್ದಿರಿಸಿ ಅಭಿವೃದ್ಧಿ ಪಡಿಸತಕ್ಕದ್ದು ಹಾಗೂ ಬೇರೆ ಉದ್ದೇಶಕ್ಕಾಗಿ ಈ ಜಾಗಗಳನ್ನು ಉಪಯೋಗಿಸುವಂತಿಲ್ಲ.

6. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಹಾಗೂ ಉದ್ಯಾನವನದಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

7. **ಅನುಮೋದಿತ ವಿನ್ಯಾಸದಲ್ಲಿ ಉದ್ಯಾನವನ/ಬಫರ್ 4969.02 ಚ.ಮೀ (ಶೇ.42.34), ರಸ್ತೆಗಾಗಿ 2849.90 ಚ.ಮೀ (ಶೇ. 24.28) ಕಾಯ್ದಿರಿಸಿರುವ ಪ್ರದೇಶಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಕುಂತೂರು ಗ್ರಾಮ ಪಂಚಾಯಿತಿ ಇವರು ಅರ್ಜಿದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳತಕ್ಕದ್ದು.**

8. **ಅನುಮೋದಿತ ವಿನ್ಯಾಸದಲ್ಲಿ ಉದ್ಯಾನವನ/ಬಫರ್ 26026.08 ಚ.ಮೀ (ಶೇ.12.77), ನಾಗರೀಕ ಸೌಲಭ್ಯ 828.13 ಚ.ಮೀ (ಶೇ.00.41) ಮತ್ತು ರಸ್ತೆಗಾಗಿ 68955.31 ಚ.ಮೀ (ಶೇ. 33.84) ಕಾಯ್ದಿರಿಸಿರುವ ಪ್ರದೇಶಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಂಡಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಇವರು ಅರ್ಜಿದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳತಕ್ಕದ್ದು.**

9. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.

10. ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರವೇ ಗ್ರಾಮ ಪಂಚಾಯಿತಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆಯತಕ್ಕದ್ದು.

11. **ನಿವೇಶನಗಳ ಬಿಡುಗಡೆಯ ಮೊದಲನೇ ಹಂತವಾಗಿ ಶೇ.60 ರಷ್ಟು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅರ್ಜಿದಾರರು / ಅಭಿವೃದ್ಧಿದಾರರು ಒದಗಿಸಿದ ನಂತರ ಉಳಿಕೆ ಶೇ.40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು. (ಕೈಪಿಡಿಯ ಮಾರ್ಗಸೂಚಿಯನ್ವಯ ಹಾಗೂ ಉಲ್ಲೇಖ (9) ರ ಸುತ್ತೋಲೆಯಂತೆ).**

12. ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಳಿ **(Water Recharge)** ಮತ್ತು ಮಳೆ ನೀರು ಸಂಗ್ರಹಣೆ **(Rain water harvesting pits)** ಗಳನ್ನು ಗುರ್ತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

13. ವಿನ್ಯಾಸ ಅಂಗೀಕಾರ ಸಂಬಂಧ ಇತರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾದ್ದಲ್ಲಿ ಅರ್ಜಿದಾರರಿಂದ ಅಂತಹ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

14. ಅನುಮೋದಿತ ವಿನ್ಯಾಸದಲ್ಲಿ ಕೊಳವೆ ಬಾವಿಯನ್ನು ತೆರೆಯುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ತೆರೆದ ಬಾವಿಯ ಬಗ್ಗೆ ಭೂ ಮಾಲೀಕರುಗಳು ಹಾಗೂ ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ : 31.12.2012 ಮತ್ತು ದಿನಾಂಕ : 06.08.2014 ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೇ ಕ್ರಮ ವಹಿಸತಕ್ಕದ್ದು.

15. ನೈಸರ್ಗಿಕವಾಗಿ ಹರಿಯುವ ನದಿ / ಹಳ್ಳ ಹಾಗೂ ಕೆರೆ ಮುಂತಾದವುದಗಳಿಗೆ ಸದರಿ ಪ್ರದೇಶದಿಂದ ಯಾವುದೇ ಮೇಲಿನ ನೀರನ್ನು ಹರಿಯಬಿಡಬಾರದು.

16. ಸದರಿ ಬಡಾವಣೆಯಲ್ಲಿ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟನ್ನು ಅಳವಡಿಸಿ "ಗೇಟೆಡ್ ಕಮ್ಯುನಿಟಿ" ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇದಿಸಲಾಗಿದೆ ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ, ಉದ್ಯಾನವನ / ಬಯಲು ಜಾಗ ಮತ್ತು ನಾಗರೀಕ ಸೌಲಭ್ಯ ನಿವೇಶನಗಳ ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಮುಕ್ತವಾಗಿ ಇಡತಕ್ಕದ್ದು.

Housiey.com

17. ಈ ಅನುಮೋದಿತ ವಿನ್ಯಾಸ ನಕ್ಷೆಯು ನಿಗಧಿಪಡಿಸಲಾದ ಮಾಪನ (ಸ್ಕೇಲ್) ದಲ್ಲಿ ವ್ಯತ್ಯಾಸ ಇರುವುದು ಕಂಡುಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳ ವಸ್ತು ಸ್ಥಿತಿ ಹಾಗೂ ಅಳತೆ ಪರಿಮಾಣಕ್ಕೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.

18. ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವುದಕ್ಕೆ ಉಪಯೋಗಿಸಲು ಬರುವುದಿಲ್ಲ.

19. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನಾಗಿ ರದ್ದುಗೊಳ್ಳುತ್ತದೆ ಹಾಗೂ ಒಟ್ಟಾರೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ.

20. ಕಂದಾಯ ಇಲಾಖೆಯಿಂದ ನೀಡಿರುವ ದಾಖಲೆ ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಮಾಲೂರು ತಾಲ್ಲೂಕು ಇವರು ದೃಢೀಕರಿಸಿ ನೀಡಿರುವ ಸರ್ವೆ ನಕ್ಷೆಯನ್ನು ಪರಿಗಣಿಸಿ ವಿನ್ಯಾಸ ನಕ್ಷೆ ರಚಿಸಿದ್ದು, ಸದರಿ ನಕ್ಷೆಯ ಮಾನ್ಯತೆಯ ಬಗ್ಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

14/10/2024

ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರು
ಕೋಲಾರ

14.10.24

<u>ಪ್ರತಿಯನ್ನು :</u>

1. ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ತಾಂತ್ರಿಕ ಅನುಮೋದಿತ ವಿನ್ಯಾಸ ನಕ್ಷೆಯನ್ನು ಮಾಹಿತಿಗಾಗಿ ಸಲ್ಲಿಸಿದೆ.
2. **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಚಿಕ್ಕಕುಂತೂರು** ಗ್ರಾಮ ಪಂಚಾಯಿತಿ, ಮಾಲೂರು ತಾಲ್ಲೂಕು, ಇವರಿಗೆ ತಾಂತ್ರಿಕವಾಗಿ ಅನುಮೋದಿತ ವಿನ್ಯಾಸ ನಕ್ಷೆಯ ಮೂರು ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಮೇಲ್ಕಂಡ ನಿಬಂಧನೆಗಳನ್ವಯ ಹಾಗೂ ಉಲ್ಲೇಖ (8) ಕೈಪಿಡಿಯ ಮಾರ್ಗಸೂಚಿಗಳನ್ವಯ ವಿನ್ಯಾಸಕ್ಕೆ **ಅನುಮೋದಿಸಿದ ನಂತರ ಒಂದು ಪ್ರತಿಯನ್ನು (ಆದೇಶದೊಂದಿಗೆ)** ಈ ಕಛೇರಿಗೆ ಕಳುಹಿಸುವಂತೆ ತಿಳಿಸಿದೆ.
3. **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕೊಂಡಶೆಟ್ಟಿಹಳ್ಳಿ** ಗ್ರಾಮ ಪಂಚಾಯಿತಿ, ಮಾಲೂರು ತಾಲ್ಲೂಕು, ಇವರಿಗೆ ತಾಂತ್ರಿಕವಾಗಿ ಅನುಮೋದಿತ ವಿನ್ಯಾಸ ನಕ್ಷೆಯ ಮೂರು ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಮೇಲ್ಕಂಡ ನಿಬಂಧನೆಗಳನ್ವಯ ಹಾಗೂ ಉಲ್ಲೇಖ (8) ಕೈಪಿಡಿಯ ಮಾರ್ಗಸೂಚಿಗಳನ್ವಯ ವಿನ್ಯಾಸಕ್ಕೆ **ಅನುಮೋದಿಸಿದ ನಂತರ ಒಂದು ಪ್ರತಿಯನ್ನು (ಆದೇಶದೊಂದಿಗೆ)** ಈ ಕಛೇರಿಗೆ ಕಳುಹಿಸುವಂತೆ ತಿಳಿಸಿದೆ.
4. ಅರ್ಜಿದಾರರಾದ **ಶ್ರೀ.** M/S SANNIDHI GREENS. Rep. its Managing Partners Sri. Chandrashekar Reddy Chaganti And Sri. K.N. Shiva Reddy ಇವರಿಗೆ ನೀಡುತ್ತಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, **ಚಿಕ್ಕಕುಂತೂರು ಮತ್ತು ಕೊಂಡಶೆಟ್ಟಿಹಳ್ಳಿ** ಗ್ರಾಮ ಪಂಚಾಯಿತಿ, ಮಾಲೂರು ತಾಲ್ಲೂಕು ಇವರಿಂದ ನಿಯಮಗಳನ್ನು ಅನುಸರಿಸಿ ಅನುಮೋದಿತ ವಿನ್ಯಾಸ ನಕ್ಷೆಯನ್ನು ಪಡೆಯಲು ಸೂಚಿಸಲಾಗಿದೆ.
5. ವಿನ್ಯಾಸ ಪ್ರತಿಗಳ ಮಾಸ್ಟರ್ ಕಡತಕ್ಕೆ ಮಾಹಿತಿಗಾಗಿ.
6. ಕಛೇರಿ ಪ್ರತಿ.

Housiey.com